ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 223 |
| ಸದಸ್ಯರ ಹೆಸರು | : | ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 06-12-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಷ್ಟ್ರೀಯ ಹೆದ್ದಾರಿ NH-367 ಇದು ಕೊಪ್ಪಳ ಜಿಲ್ಲೆಯ ಭಾನಪುರದಿಂದ ಪ್ರಾರಂಭವಾಗಿ ಬಾಗಲಕೋಟೆ ಜಿಲ್ಲೆಯ ಗದ್ದನಕೇರಿ ಕ್ರಾಸ್‌ವರೆಗಿನ 158 ಕಿ.ಮೀ ಕಾಮಗಾರಿಯಲ್ಲಿ 25 ಕಿ.ಮೀ. ಅಳತೆಯ ಶಿರೂರು ಕ್ರಾಸ್‌ನಿಂದ ಗದ್ದನಕೇರಿ ಕ್ರಾಸ್‌ವರೆಗಿನ ದೂರವನ್ನು ಚತುಷ್ಪಥ ರಸ್ತೆಯನ್ನಾಗಿ ನಿರ್ಮಾಣ ಮಾಡಲಾಗುತ್ತಿದೆಯೇ; | ರಾಷ್ಟ್ರೀಯ ಹೆದ್ದಾರಿ ವಲಯ ವ್ಯಾಪ್ತಿಗೆ ಬರುವ ರಾಷ್ಟ್ರೀಯ ಹೆದ್ದಾರಿ-367 ಭಾಗವಾದ ಶಿರೂರ ದಿಂದ ಗದ್ದನಕೇರಿ ಕ್ರಾಸ್‌ವರೆಗೆ 24.265 ಕಿ.ಮೀ ರಸ್ತೆಯನ್ನು ಚತುಷ್ಪಥ ರಸ್ತೆಯನ್ನಾಗಿ ನಿರ್ಮಾಣ/ಅಭಿವೃದ್ಧಿ ಪಡಿಸಲು "Widening to 4 lane from Km. 133.00 to 158.04 (design Chainage Km. 130.88 to 155.145) (Shirur Cross to Gaddankeri) of NH-367 in the State of Karnataka on Engineering Procurement Construction EPC mode. (Job No. NH-367-KNT-2021-22-930)" ಕಾಮಗಾರಿಯು 2021-22 ನೇ ಸಾಲಿನ ವಾರ್ಷಿಕ ಯೋಜನೆಯಡಿ ಅನುಮೋದನೆಯಾಗಿದ್ದು, ದಿನಾಂಕ: 18-01-2023ರಂದು ಕಾರ್ಯದೇಶ ನೀಡಲಾಗಿದ್ದು, ದಿನಾಂಕ:17-01-2025ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಪ್ರಸ್ತುತ, 12.50 ಕಿ.ಮೀ ಭೌತಿಕ ಪ್ರಗತಿ ಹಾಗೂ ರೂ.73.15 ಕೋಟಿಗಳ ಆರ್ಥಿಕ ಪ್ರಗತಿ ಸಾಧಿಸಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಪ್ರಸ್ತುತ ಲಭ್ಯವಿರುವ ಸರಕಾರಿ ಜಮೀನಿನಲ್ಲಿ ಕೈಗೊಳ್ಳಲಾಗುತ್ತಿರುತ್ತದೆ ಹಾಗೂ ಸಧ್ಯದ ಮಟ್ಟಿಗೆ ಖಾಸಗಿ ಜಮೀನಿನಲ್ಲಿ ಯಾವುದೇ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ.<br><br>ಸದರಿ ಕಾಮಗಾರಿಯ ಭಾಗವಾದ ಶಿರೂರ ದಿಂದ ಗದ್ದನಕೇರಿ ಕ್ರಾಸ್‌ವರೆಗೆ ಬಾಗಲಕೋಟೆ ಜಿಲ್ಲೆಯಲ್ಲಿ ಬರುವ ಸರ್ಕಾರಿ ಹಾಗೂ ಸಾರ್ವಜನಿಕರಿಗೆ ಸೇರಿದ ಜಮೀನುಗಳಲ್ಲಿ ಒಟ್ಟು 1.27Ha. ಭೂಸ್ವಾಧೀನಪಡಿಸಿಕೊಳ್ಳಲು ದಿನಾಂಕ:22.09.2023 ರಂದು ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956ರ ಕಲಂ 3(D)(1) ರಂತೆ ಅಂತಿಮ ಅಧಿಸೂಚನೆ ಪ್ರಕಟಣೆಯಾಗಿರುತ್ತದೆ. 3(D)(1) ಅಧಿಸೂಚನೆಯಂತೆ ಬಾಗಲಕೋಟೆ ಜಿಲ್ಲೆ ಮತ್ತು ತಾಲೂಕಿನ ಗ್ರಾಮಗಳಾದ ಕೆಸನೂರು, ಶಿರೂರ ಹಾಗೂ ಕಸಬಾ ಬಾಗಲಕೋಟೆಯ ಕೆಲವು ಜಮೀನುಗಳು ಎಲ್ಲಾ ಋಣರಾಹಿತ್ಯಗಳಿಂದ (Encumbrance free) ಮುಕ್ತಗೊಂಡು ಭೂಸ್ವಾಧಿನಕೊಳಪಟ್ಟಿರುತ್ತದೆ. ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕೆ ಮೇಲ್ಕಂಡ ಅಧಿಸೂಚನೆಯನ್ವಯ ಯಾವುದೇ ಕಟ್ಟಡಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ. ಭೂಸ್ವಾಧಿನಕ್ಕೊಳಪಟ್ಟ ಜಮೀನುಗಳ Survey/Plot No., ಸರ್ಕಾರಿ/ಖಾಸಗಿ ಜಮೀನು, ಭೂಮಿಯ ಸ್ವರೂಪ, ಪ್ರದೇಶದ ವಿಸ್ತೀರ್ಣ ಹಾಗೂ ಭೂಮಾಲಿಕರ ಹೆಸರುಗಳು ಒಳಗೊಂಡಂತೆ ಮಾಹಿತಿಯನ್ನು ಪ್ರತ್ಯೇಕವಾಗಿ 3(D) ಅಧಿಸೂಚನೆ ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಹಾಗಿದ್ದಲ್ಲಿ ಅವಶ್ಯಕವಾಗಿ ಸಾರ್ವಜನಿಕರಿಗೆ ಸೇರಿದ ಜಮೀನುಗಳು ಮತ್ತು ಕಟ್ಟಡಗಳ ಸ್ವಾಧೀನ ಮಾಡಿಕೊಳ್ಳಲಾಗಿದೆಯೇ: ಸ್ವಾಧೀನ ಪಡಿಸಿಕೊಂಡ ಕಟ್ಟಡಗಳ ಅಳತೆ ವಿವರ ಮತ್ತು ವಿತರಿಸಲಾದ ಪರಿಹಾರ ಧನದ ಮಾಹಿತಿ ಸ್ವಾಧೀನಪಡಿಸಿಕೊಂಡ ಕಟ್ಟಡಗಳ ಅಳತೆ ವಿವರ ಮತ್ತು ವಿತರಿಸಲಾದ ಪರಿಹಾರಧನದ ಬಗ್ಗೆ ಸಂಪೂರ್ಣ ಮಾಹಿತಿಗಳನ್ನು ಒದಗಿಸುವುದು; | |

| | | | |
|---|---|---|---|
| | | | ಮುಂದುವರೆದು, ಭೂಸ್ವಾಧಿನಕ್ಕೆ ಒಳಪಟ್ಟ ಜಮೀನುಗಳಿಗೆ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956ರ ಕಲಂ 3(ಉ)(1)(2)(3(4) ರನ್ವಯ ಸಂಬಂದಪಟ್ಟ ವಿಶೇಷ ಭೂಸ್ವಾಧೀನಾಧಿಕಾರಿಗಳು ಸಂಬಂಧಪಟ್ಟ ಉಪನೊಂದಣಾಧಿಕಾರಿಗಳಿಂದ ಚಾಲ್ತಿಯಲ್ಲಿರುವ ಮಾರ್ಗಸೂಚಿ ದರ ಮತ್ತು ಮಾರುಕಟ್ಟೆ ದರಗಳನ್ವಯ ದರಗಳನ್ನು ಪಡೆದು ಪರಿಶೀಲಿಸಿ, ಐತೀರ್ಪು ಘೋಷಣೆ ಮಾಡಿ, ಭೂಸ್ವಾಧೀನಕ್ಕೆ ಒಳಪಟ್ಟ ಜಮೀನಿನ ಭೂಮಾಲೀಕರುಗಳಿಗೆ ಪರಿಹಾರ ಪಾವತಿಸಲಾಗುವುದು. |
| ಇ) | | ರಸ್ತೆಯ ಅಗಲೀಕರಣ ಸಂದರ್ಭದಲ್ಲಿ ಅವಶ್ಯಕವಾದ ಹೆಚ್ಚುವರಿ ಕ್ಷೇತ್ರವು ರಸ್ತೆಯ ಮಧ್ಯಭಾಗದ ಎರಡೂ ಬದಿಗಳಲ್ಲಿ ಸಮನಾಗಿ ಒಳಗೊಳ್ಳುವಂತೆ ವಶಪಡಿಸಿಕೊಳ್ಳುವ ನಿಯಮವಿದ್ದರೂ ಕೆಲವರಿಗೆ ಮಾತ್ರ ಸಹಾಯ ಮಾಡುವಂತೆ ಒಂದೇ ಬದುವಿನಲ್ಲಿ ಅಲ್ಲಲ್ಲಿ ಅಗಲೀಕರಣ ಮಾಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಸದರಿ ರಸ್ತೆಯ ಅಗಲೀಕರಣ ಕಾಮಗಾರಿ ಭೂಸಾರಿಗೆ ಮಂತ್ರಾಲಯ ನವದೆಹಲಿಯಿಂದ ಮಂಜೂರಾದ ಪಂಕ್ತಿಕರಣದ ಪ್ರಕಾರ ಕೈಗೊಳ್ಳಲಾಗುತ್ತಿದ್ದು, ಅದರಂತೆ ಅವಶ್ಯವಿರುವ ಭೂಸ್ವಾಧೀನ ಪ್ರಕ್ರಿಯೆ ಕೂಡ ಮಾಡಲಾಗುತ್ತಿದೆ. ಮುಂದುವರೆದು ಸದರಿ ಭಾಗದ ಕಿ.ಮೀ 144.254ರಲ್ಲಿ ಬರುವ ರೈಲ್ವೆ ಮೇಲ್ಸೇತುವೆಯು, ರೈಲ್ವೆ ಇಲಾಖೆಯಿಂದ ಅನುಮೋದನೆಗೊಂಡು, ಸದರಿ ನಕ್ಷೆಗೆ ಅನುಗುಣವಾಗಿ ಭೂಸ್ವಾಧೀನ ಕಾರ್ಯ ಕೈಗೊಳ್ಳಲಾಗುವುದು. |

ಸಂಖ್ಯೆ:ಲೋಇ 237 ಸಿಎನ್‌ಹೆಚ್ 2023 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು